ಎದೆಗಿಳಿದು ನರ್ತಿಸಗೊಡಗಿದಾಗ, ಈ ಹಿಂದಿನ ಎಲ್ಲ ಆಲೋಚನೆಗಳು ಮರೆಯಾದವು. ಪೌರುಷ ಜಾಗೃತವಾಯಿತು. 'ತಿಷಾ' ಎಂದು ಕರೆಯುತ್ತ ಆ ಕಿಶೋರಿಯನ್ನು ಬರಸೆಳೆದು ಅವಳ ಚಿಗುರು ಅಧರಗಳನ್ನು ಇನ್ನಿಲ್ಲದಷ್ಟು ಮೃದುವಾಗಿ ಚುಂಬಿಸತೊಡಗಿದೆ.

## ಕುಣಾಲ

ಪ್ರೀತಿಯ ತಂದೆ ಸಾಮ್ರಾಟ ಅಶೋಕನಿಂದ ನಿರೂಪ ಬಂದಿದೆ. ದೂತ ಬಂದು 'ಚಕ್ರವರ್ತಿಗಳು ನಿರೂಪ ಕಳುಹಿಸಿದ್ದಾರೆ' ಎಂದಾಗ ಅಚ್ಚರಿಯಾದುದು ನಿಜ. ಪಾಟಲಿಪುತ್ರದಿಂದ ಮರಳಿ ಬಂದು ಒಂದು ವಾರವೂ ಗತಿಸಿಲ್ಲ. ಹೇಳಬಹುದಾದುದನ್ನೂ ಅಲ್ಲಿಯೇ ಹೇಳಬಹುದಿತ್ತಲ್ಲ. ಇಷ್ಟು ಕ್ಷಿಪ್ರ ಅವಧಿಯಲ್ಲಿ ನಿರೂಪ ಕಳಿಸುವ ರಾಜಕಾರ್ಯ ಏನಿರಬಹುದು ಎಂದು ಯೋಚಿಸುತ್ತಲೆ ನಿರೂಪದ ಸುರಳಿ ಬಿಚ್ಚಿದೆ. ವಿಷಯ ಓದಿದ ಮೇಲೆ ಅಚ್ಚರಿಯೂ, ಒಂದು ತೆರನ ಭಯವೂ ಏಕಕಾಲಕ್ಕೆ ಉಂಟಾದವು. ವಿಷಯವಿದ್ದುದೆ ಹಾಗೆ.

ರಾಣಿ ತಿಷ್ಯರಕ್ಷಿತಾ ಕೆಲದಿನಗಳ ಕಾಲ ತಕ್ಷಶಿಲೆಗೆ ಬರಲು ಉತ್ಸುಕಳಾಗಿರುವಳೆಂದೂ, ಕಳೆದ ವಾರ ಪಾಟಲಿಪುತ್ರಕ್ಕೆ ಪತ್ನಿ ಕಾಂಚನಮಾಲಾಳೊಂದಿಗೆ ನಾನು ತೆರಳಿದಾಗ, ನನ್ನ ಪತ್ನಿ ಇಟ್ಟ ಆಹ್ವಾನವನ್ನು ಒಪ್ಪಿ ತಕ್ಷಶಿಲೆಗೆ ಬರುತ್ತಿರುವುದಾಗಿಯೂ, ರಾಣಿಯ ತಕ್ಷಶಿಲೆಯ ವಾಸ್ತವ್ಯದ ದಿನಗಳಲ್ಲಿ ಯಾವುದಕ್ಕೂ ವ್ಯತ್ಯಯ ಬಾರದಂತೆ ಸೌಕರ್ಯಗಳನ್ನು ಕಲ್ಪಿಸಬೇಕೆಂದೂ, ಅವಳನ್ನು ಸಂತೋಷವಾಗಿಡಲು ಬೇಕಾದ ಎಲ್ಲ ಏರ್ಪಾಡುಗಳನ್ನು ಮಾಡಿಕೊಳ್ಳಬೇಕೆಂದೂ ಆ ನಿರೂಪದಲ್ಲಿ ತಿಳಿಸಲಾಗಿತ್ತು.

ಅಚ್ಚರಿಗೆ ಕಾರಣ ಕಾಂಚನಮಾಲಾ ರಾಣಿ ತಿಷ್ಯರಕ್ಷಿತಾಳನ್ನು ತಕ್ಷಶಿಲೆಗೆ ಆಹ್ವಾನಿಸಿದ್ದು ಮತ್ತು ಆ ವಿಷಯವನ್ನು ನನ್ನೆದುರಿಗೆ ಪ್ರಸ್ತಾಪಿಸದೆ ಇದ್ದುದು. ಇನ್ನು ಅವ್ಯಕ್ತಭೀತಿಗೆ ಕಾರಣ ನಾನು ಪಾಟಲಿಪುತ್ರದಲ್ಲಿದ್ದಾಗ ತಿಷ್ಯರಕ್ಷಿತಾ ತೋರಿದ ಅಸಹಜ ನಡವಳಿಕೆ.

ನಿರೂಪ ತಂದ ದೂತನಿಗೆ ರಾಜಾಜ್ಞೆಯನ್ನು ಅಕ್ಷರಶಃ ಪಾಲಿಸುವುದಾಗಿ ಹೇಳಿ ಸಾಗಹಾಕಿದ ಮೇಲೆ ನೇರವಾಗಿ ನಡೆದದ್ದು ಅಂತಃಪುರಕ್ಕೆ. ನಮ್ಮ ಮಗ ಸಂಪ್ರತಿಯ ಸಂಗೀತಾಭ್ಯಾಸವನ್ನು ಚಿತ್ತವಿಟ್ಟು ಆಲಿಸುತ್ತ ಕುಳಿತಿದ್ದ ಕಾಂಚನಮಾಲಾ ಆ ವೇಳೆಯಲ್ಲಿ ಅಂತಃಪುರಕ್ಕೆ ಆಗಮಿಸಿದ ನನ್ನನ್ನು ಕಂಡು ಎದ್ದು ನಿಂತಳು. ಸಂಪ್ರತಿಯ ಸಂಗೀತಾಭ್ಯಾಸಕ್ಕೆ ತೊಂದರೆ ಮಾಡಬೇಡವೆಂದು ಬಾಯಿಯ ಮೇಲೆ ಬೆರಳಿಟ್ಟುಕೊಂಡು ಸೂಚಿಸಿ, ಶಾಸ್ತ್ರಾಧ್ಯಯನದ ಕೊಠಡಿಯಿಂದ ಹೊರ ನಡೆದೆ. ನನ್ನ ಇಂಗಿತವನ್ನರಿತ ಕಾಂಚನಮಾಲಾ ನನ್ನ ಹಿಂದೆಯೆ ನಡೆದು ಬಂದಳು.

ಅಂತಃಪುರದ ಪ್ರಾಂಗಣದಲ್ಲಿ ಹೆಜ್ಜೆ ಹಾಕುತ್ತ ಕೇಳಿದೆ: "ಕಾಂಚನಾ, ರಾಣಿ ತಿಷ್ಯರಕ್ಷಿತಾಳನ್ನು ತಕ್ಷಶಿಲೆಗೆ ಆಹ್ವಾನಿಸಿದ್ದೆಯಾ?" ನನ್ನ ಅನಿರಿಕ್ಷಿತ ಪ್ರಶ್ನೆಯಿಂದ ಗೊಂದಲಕ್ಕೊಳಗಾದ ಆಕೆ, "ಇಲ್ಲವಲ್ಲ, ಅದೇಕೆ ಹಾಗೆ ಕೇಳಿದಿರಿ?" ಎಂದಳು. ಮಹಾರಾಜರು ಕಳಿಸಿದ ನಿರೂಪದ ವಿಷಯ ತಿಳಿಸಿದಾಗ, "ಅಯ್ಯೋ ತಿಷ್ಯರಕ್ಷಿತಾ ಅತ್ತೆ ನನ್ನೊಡನೆ ಮಾತನಾಡುತ್ತ 'ತಕ್ಷಶಿಲೆಯನ್ನು ನೋಡದೆ ಬಹಳ ದಿನವಾಯಿತು, ಅಲ್ಲಿಗೆ ಕೆಲದಿನಗಳ ಮಟ್ಟಿಗೆ ಬರಲೆ?' ಎಂದು ಕೇಳಿದಾಗ 'ಅದು ನಿಮ್ಮದೇ ಮನೆ. ನಿಮ್ಮ ಮನೆಗೆ ನೀವು ಬರಲು ನನ್ನನ್ನು ಕೇಳಬೇಕೆ? ನಿಮಗೆ ಬೇಕೆನಿಸಿದಾಗ ಧಾರಾಳವಾಗಿ ಬನ್ನಿ' ಎಂದಿದ್ದೆ. 'ಈಗೇನಾಯಿತು. ಅತ್ತೆ ನಮ್ಮಲ್ಲಿಗೆ ಬರುತ್ತಿರುವುದು ನಮ್ಮ ಸೌಭಾಗ್ಯ. ಉಪಚಾರದ ಹೊಣೆ ನನಗೆ ಬಿಡಿ" ಎಂದು ಹರ್ಷಚಿತ್ತಳಾಗಿ ಉತ್ತರಿಸಿದಳು.

ಸೌಭಾಗ್ಯವಲ್ಲ, ದೌರ್ಭಾಗ್ಯ ಎಂದು ಅವಳಿಗೆ ಹೇಗೆ ಹೇಳಲಿ? ಪಾಟಲೀಪುತ್ರದಲ್ಲಿದ್ದಾಗ ಚಿಕ್ಕತಾಯಿ ತಿಷ್ಯರಕ್ಷಿತಾ ನಡೆದುಕೊಂಡ ರೀತಿ ಜಿಗುಪ್ಸೆ ತರಿಸಿತ್ತು. ಅಂದು ಅಂತಃಪುರದಲ್ಲಿ ಬಹುದಿನಗಳ ನಂತರ ಭೇಟಿಯಾದ ನನ್ನ ಪ್ರೀತಿಯ ಅವ್ವ ಕೌರ್ವಕಿಯ ಜೊತೆಗೆ ಮಾತನಾಡುತ್ತಿದ್ದೆ. ಚಿಕ್ಕತಾಯಿ ಯಾವಾಗ ಆಗಮಿಸಿದ್ದಳೋ ಏನೋ. ಬಹುದಿನಗಳ ನಂತರ ಭೇಟಿಯಾದ ನನ್ನ ಪ್ರೀತಿಯ ತಾಯಿ ಕೌರ್ವಕಿಯ ಜೊತೆಗೆ ಮಾತನಾಡುವ ಮುದದಲ್ಲಿ ಸುತ್ತಣ ಪ್ರಪಂಚವನ್ನೇ ಮರೆತಿದ್ದೆ. ಕೊಂಚ ಸಮಯದ ಬಳಿಕ ತಿಷ್ಯರಕ್ಷಿತಾಳನ್ನು ನೋಡಿದ ಕೌರ್ವಕಿ ಅವ್ವ, "ಅದೋ ನಿನ್ನ ಚಿಕ್ಕವ್ವ ಬಂದಳು ನೋಡು" ಎಂದಳು. ಹೊರಳಿ ನೋಡಿದಾಗ ನನ್ನನ್ನೇ ನಿಟ್ಟಿಸುತ್ತ ನಿಂತಿದ್ದ ಷೋಡಶಿ